ಮೂರರಿಂದ ನಾಲ್ಕು ಬಾರಿ ಪೋಸ್ಟ್ ಮಾರ್ಟಂ ರಾಮುಲು ಆರೋಪ

ಉದಯಕಾಲ ನ್ಯೂಸ್, ಬಳ್ಳಾರಿ: ರಾಜಶೇಖರ್ ಎಂಬ ಯುವಕನ ಪೋಸ್ಟ್ ಮಾರ್ಟಂ ಒಂದೇ ಬಾರಿ ಮಾಡಲಿಲ್ಲ. ಮೂರರಿಂದ ನಾಲ್ಕು ಬಾರಿ ಮಾಡಿದ್ದಾರೆ. ಒಮ್ಮೆ ಪೋಸ್ಟ್ ಮಾರ್ಟಂ ಮಾಡುವಾಗ ಷಡ್ಯಂತ್ರ ಮಾಡಿ ಅದನ್ನು ಹಾಗೆಯೇ ಮುಚ್ಚಿಹಾಕಬೇಕು ಎಂದು ಪ್ರಯತ್ನಿಸಿದ್ದಾರೆ. ಆ ಗುಂಡನ್ನು ಹೊರತೆಗೆಯಲಾರದಂತೆ ಅವರ ಮೇಲೆಯೇ ಹಾಕಬಹುದು ಎಂದು ಪ್ರಯತ್ನವನ್ನೂ ಕೂಡಾ ಮಾಡಿದ್ದಾರೆ ಎಂದು ಮಾಜಿ ಸಚಿವ ಶ್ರೀರಾಮುಲು ಆರೋಪಿಸಿದ್ದಾರೆ.

ನಗರದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮೊದಲ ಬಾರಿಗೆ ಪೋಸ್ಟ್ ಮಾರ್ಟಂ ಮಾಡಿದ ವೇಳೆ ಆ ಗುಂಡು ಸಿಕ್ಕಿಲ್ಲ. ಆಗ ಹಾಗೆಯೇ ಹೋಗಿ ಅಂತ್ಯ ಸಂಸ್ಕಾರ ಮಾಡುವ ಪ್ರಯತ್ನ ನಡೆಸಿದ್ದಾರೆ. ಬಹಳ ಪೋರ್ಸ್ ಆಗಿ ಪೋಸ್ಟ್ ಮಾರ್ಟಂ ಮಾಡಿದ್ದಾರೆ. ಆದರೆ, ಅವರ ಪೋರ್ಸ್ನ್ನ ಅವರ ಪಾರ್ಟಿಯಲ್ಲಿರುವ ಬಹಳಷ್ಟು ಹಿರಿಯ ನಾಯಕರು ಒಪ್ಪಿಕೊಳ್ಳಲು ರೆಡಿ ಇರಲಿಲ್ಲ. ಇದನ್ನು ಮುಚ್ಚಿಹಾಕುವ ಪ್ರಯತ್ನ ಮಾಡಿದ ಸಮಯದಲ್ಲಿ ಇದು ಆಗಲ್ಲ ಎಂದು ಎಲ್ಲ ಹಿರಿಯ ಅಧಿಕಾರಿಗಳು, ಐಜಿ, ಇಂಟಲಿಜೆನ್ಸ್ನವರು ಹಾಗೂ ನಮ್ಮ ಪೊಲೀಸರು ಸೇರಿಕೊಂಡು ಮತ್ತೆ ಪೋಸ್ಟ್ ಮಾರ್ಟಂ ಮಾಡಿಸಿದ್ದಾರೆ ಎಂದು ಹೇಳಿದರು.

ಬಹಳಷ್ಟು ರಾಜಕಾರಣಿಗಳು ಸೇರಿಕೊಂಡು ಆ ಗುಂಡನ್ನು ಹೊರತೆಗೆಯದಂತೆ ಮುಚ್ಚಿಹಾಕುವ ಪ್ರಯತ್ನ ಮಾಡಿದ್ದಾರೆ. ಅವರ ಸರ್ಕಾರದಲ್ಲಿ ಶಾಸಕರಿರುವುದರಿಂದ ಸಕಾರದ ಮೇಲೆಯೇ ನಾವು ಆರೋಪ ಮಾಡಬೇಕಾಗುತ್ತದೆ. ಭರತ್ ರೆಡ್ಡಿಯವರೇ ಈ ಗೊಂದಲವನ್ನು ಪ್ರಾರಂಭ ಮಾಡಿರುವುದು. ಅವರ ಅಂಗರಕ್ಷಕರಿಂದ ಗುಂಡು ಹಾರಿರುವುದು. ಅದರಿಂದಾಗಿ ಆ ಅಮಾಯಕ ಹುಡುಗ ತೀರಿಕೊಂಡಿದ್ದಾನೆ ಎಂದಿದ್ದಾರೆ. ಘಟನೆಯ ನಂತರ ಅವರು ಮೊದಲು ಏನೆಂದು ಹೇಳಿಕೆ ಕೊಟ್ಟರು?. ನಮಗೂ ಅದಕ್ಕೂ ಸಂಬಂಧವಿಲ್ಲ, ಬಿಜೆಪಿಯವರೇ ಗುಂಡು ಹಾರಿಸಿದ್ದಾರೆ ಎಂದಿದ್ದಾರೆ. ಅಲ್ಲದೇ, ಪೋಸ್ಟ್ ಮಾರ್ಟಂ ಟೈಮ್ನಲ್ಲೂ ಇದನ್ನು ಮುಚ್ಚಿಹಾಕುವ ಪ್ರಯತ್ನ ಮಾಡಿದರು. ಆಗ ಅಲ್ಲಿದ್ದ ಪ್ರಾಮಾಣಿಕ ಅಧಿಕಾರಿಗಳು ಇದಕ್ಕೆ ಒಪ್ಪದೇ ಪುನಃ ಎರಡು ಬಾರಿ ಪೋಸ್ಟ್ ಮಾರ್ಟಂ ಮಾಡಿ ಗುಂಡನ್ನು ಹೊರತೆಗೆದಿದ್ದಾರೆ ಎಂದು ತಿಳಿಸಿದ್ದಾರೆ. ಎರಡು ಕಡೆಯವರು ಕಟ್ಟಿಗೆ ಹಾಗೂ ಕಲ್ಲುಗಳನ್ನು ತಂದು ಇರಿಸಿಕೊಂಡಿದ್ದರು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮನುಷ್ಯ ಕಾಲು ಕೆರೆದುಕೊಂಡು ಜಗಳಕ್ಕೆ ಬರುತ್ತಾನೆ ಎಂದರೆ ನಾವು ಏನು ಮಾಡಲು ಸಾಧ್ಯ ಆಗುತ್ತೆ. ಜನಾರ್ದನ ರೆಡ್ಡಿಯವರು ನಮ್ಮ ಮನೆ ಬಳಿ ಬರುವರೆಗೂ ನಮಗೆ ಯಾವುದೇ ಸೂಚನೆ ಇರಲಿಲ್ಲ ಎಂದು ಹೇಳಿದ್ದಾರೆ.

ಮುದ್ರಾ ಯೋಜನೆಯಿಂದ 10 ಸಾವಿರ ಕೋಟಿ ಅನುದಾನ: ಶ್ರೀವತ್ಸ

ಉದಯಕಾಲ ನ್ಯೂಸ್

ಮೈಸೂರು: ಕೇಂದ್ರ ಸರ್ಕಾರದ ಅನೇಕ ಯೋಜನೆಗಳಿಂದ ಜಿಲ್ಲೆಗೆ ಕೋಟ್ಯಂತರ ರೂಪಾಯಿ ದೊರೆತ್ತಿದೆ. ಮುಖ್ಯವಾಗಿ ಪ್ರಧಾನ ಮಂತ್ರಿ ಮುದ್ರಾ ಯೋಜನೆ ಅಡಿಯಲ್ಲಿ 2019 ರಿಂದ 2025 ರವರೆಗೆ ಜಿಲ್ಲೆಗೆ 10 ಸಾವಿರ ಕೋಟಿ ರೂ. ಸಿಕ್ಕಿದ್ದು, ನಮ್ಮ ಪಕ್ಷದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಇದರ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ನಗರದ ಇಂದ್ರಲೋಕ ಕನ್ವೆನ್ಷನ್ ಹಾಲ್‌ನಲ್ಲಿ ಸೋಮವಾರ ಆಯೋಜಿಸಿದ್ದ ಭಾರತೀಯ ಜನತಾ ಪಾರ್ಟಿ ಮೈಸೂರು ಮಹಾನಗರ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಎಸ್ ಟಿ ಬಗ್ಗೆ ಏನೆಲ್ಲಾ ಮಾತನಾಡುತ್ತಾರೆ. ಮೋದಿ ಅವರು ರಾಜ್ಯದ ತೆರಿಗೆ ಪಾಲು ನೀಡುವುದರ ಜೊತೆಗೆ ದೇಶಾದ್ಯಂತ ಕೋಟ್ಯಂತರ ರೂ. ಅನುದಾನ ನೀಡುವ ಮೂಲಕ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಆ ಎಲ್ಲ ಯೋಜನೆಗಳ ಪಾಲು ನಮ್ಮ ರಾಜ್ಯಕ್ಕೂ ಸಿಕ್ಕಿದೆ. ಜಿಲ್ಲೆಯ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 60 ಸಾವಿರ ಜನ ಮುದ್ರಾ ಯೋಜನೆಯಿಂದ ಬದುಕುತ್ತಿದ್ದಾರೆ. ಜಲ ಜೀವನ್ ಮಿಷನ್ ಅಡಿಯ 2900 ಕೋಟಿ ರೂ. ಅನುದಾನದಲ್ಲಿ ಜಿಲ್ಲೆಯ ಪ್ರತಿ ಮನೆ ಮನೆಗೆ ಕುಡಿಯುವ ನೀರು ನೀಡಲಾಗಿದೆ. ಕೇಂದ್ರ ಸರ್ಕಾರದ ಯೋಜನೆಗಳಿಂದ ನಾವು ಕ್ಷೇತ್ರದಲ್ಲಿ ತಲೆ ಎತ್ತಿ ಓಡಾಡುವಂತೆ ಆಗಿದೆ. ಈ ಬಗ್ಗೆ ನಮ್ಮ ಕಾರ್ಯಕರ್ತರು ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದರು.

> ಜೆಡಿಎಸ್ ಜೊತೆಯ ಮೈತ್ರಿಯನ್ನು ರಾಜ್ಯ ಮತ್ತು ರಾಷ್ಟ್ರೀಯ ನಾಯಕರು ಒಪ್ಪಿಕೊಂಡಿದ್ದಾರೆ. ಮೈತ್ರಿ ಬೇಡ ಎನ್ನುವ ಅಧಿಕಾರ ನಮಗೆ ಯಾರಿಗೂ ಇಲ್ಲ. ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಬೇರೆ ಅಪಸ್ವರದ ಮಾತನಾಡಿದ್ದಾರೆ. ಅವರೆಲ್ಲ ರಾಜ್ಯ ಮತ್ತು ರಾಷ್ಟ್ರೀಯ ನಾಯಕರಿಗಿಂತ ದೊಡ್ಡವರಲ್ಲ. ಮೈತ್ರಿ ವಿರುದ್ಧ ಅಪಸ್ವರ ಎತ್ತುವವರ ವಿರುದ್ಧ ಪಕ್ಷ ಕಠಿಣ ಕ್ರಮ ಕೈಗೊಳ್ಳುತ್ತದೆ. ಹಾಗಾಗಿ, ಈ ಬಗ್ಗೆ ಮಾತನಾಡುವಾಗ ಎಚ್ಚರ ವಹಿಸಬೇಕು. ಜೊತೆಗೆ ಪಕ್ಷ ಯಾರಿಗೆ ಟಿಕೆಟ್ ನೀಡಿದರೂ ಅವರನ್ನು ಗೆಲ್ಲಿಸುವ ಕೆಲಸ ಮಾಡಬೇಕು. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿ ಆದರೆ, ನಮ್ಮ ಕ್ಷೇತ್ರದ ಅಭ್ಯರ್ಥಿ ಸೋಲಲಿ ಎಂಬ ಮನೋಭಾವವನ್ನು ದೂರ ಮಾಡಬೇಕು.
>
> **-ಟಿ.ಎಸ್.ಶ್ರೀವತ್ಸ, ಶಾಸಕ**

ನಮ್ಮ ಪಕ್ಷ ಬೂತ್ ಮಟ್ಟದಲ್ಲಿ ಆಕ್ಟಿವ್ ಆಗಬೇಕು. ಕಾರ್ಯಕರ್ತರು ಹಾಗೂ ಪದಾಧಿಕಾರಿಗಳು ಖಡ್ಡಾಯವಾಗಿ ಮನ್ ಕಿ ಬಾತ್ ಕೇಳಬೇಕು. ಅಲ್ಲಿ ಚರ್ಚೆಯಾಗುವ ವಿಷಯಗಳನ್ನು ಸಾರ್ವಜನಿಕರಿಗೆ ತಿಳಿಸುವ ಕೆಲಸ ಮಾಡಬೇಕು ಎಂದರು. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಇಡೀ ವಿಶ್ವದಲ್ಲಿ ಬಿಜೆಪಿ ದೊಡ್ಡ ಪಕ್ಷ. ನಮ್ಮ ಪಕ್ಷದಲ್ಲಿ ವೈವಿಧ್ಯತೆ ಇದೆ. ಎಲ್ಲರಿಗೂ ಸಮಾನ ಅವಕಾಶ ನೀಡಲಾಗುತ್ತದೆ. ನಮ್ಮ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಪಕ್ಷವನ್ನು ತಳಮಟ್ಟದಿಂದ ಸಂಘಟಿಸಬೇಕು. ಆ ಮೂಲಕ ಮುಂದೆ ಬರಲಿರುವ ಸ್ಥಳೀಯ ಸಂಸ್ಥೆ, ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಮತ್ತೆ ಅಧಿಕಾರಕ್ಕೆ ಬರಲು ಸಹಕರಿಸಬೇಕು ಎಂದರು.

ಕೇಂದ್ರದಲ್ಲಿ ದೇಶದ ಅಭಿವೃದ್ಧಿಯೇ ಗುರಿಯಾಗಿದೆ. ಮೂರನೇ ಬಾರಿಗೆ ನರೇಂದ್ರ ಮೋದಿ ಪ್ರಧಾನಿಯಾಗಿ ಕೆಲಸ ಮಾಡುತ್ತಿದ್ದಾರೆ. ಅದೇ ರೀತಿ ರಾಜ್ಯದಲ್ಲಿ ಕನ್ನಡಿಗರ ಅಭಿವೃದ್ಧಿಗಾಗಿ, ಕನ್ನಡಿಗರ ಬೆಳವಣಿಗೆಗಾಗಿ ಬಿಜೆಪಿ ಅಧಿಕಾರಕ್ಕೆ ಬರಬೇಕು ಎಂಬ ಭಾವನೆ ಮೂಡಿಸಬೇಕು. ಇತ್ತೀಚೆಗೆ ಉತ್ತರ ಭಾರತದ ಎಲ್ಲ ರಾಜ್ಯದ ಚುನಾವಣೆಯಲ್ಲೂ ಬಿಜೆಪಿ ಪರ ಜನಾದೇಶ ಬಂದಿದೆ. ಅಲ್ಲಿನ ಸಂಘಟನೆ ಮತ್ತು ನಾಯಕತ್ವದ ಗುಣದಿಂದ ಅದು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ನಮ್ಮ ರಾಜ್ಯದಲ್ಲೂ ಅಂತಹ ಫಲಿತಾಂಶ ತರುವ ನಿಟ್ಟಿನಲ್ಲಿ ಕಾರ್ಯಕರ್ತರು ಮತ್ತು ಪದಾಧಿಕಾರಿಗಳು ಕೆಲಸ ಮಾಡಬೇಕು ಎಂದರು.

ಇದೇ ವೇಳೆ ನೂತನ ಪದಾಧಿಕಾರಿಗಳು ಅಧಿಕಾರ ಸ್ವೀಕರಿಸಿದರು. ಮೈಸೂರು ಮಹಾನಗರ ಅಧ್ಯಕ್ಷ ಹಾಗೂ ಶಾಸಕ ಎಲ್ .ನಾಗೇಂದ್ರ ಮಾತನಾಡಿದರು. ಮೈಸೂರು ಗ್ರಾಮಾಂತರ ಘಟಕದ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ, ರಾಜ್ಯ ಅಲ್ಪಸಂಖ್ಯಾರ ಮೋರ್ಚಾ ಅಧ್ಯಕ್ಷ ಅನಿಲ್ ಥಾಮಸ್, ಮಾಜಿ ಎಂಎಲ್‌ಸಿ ತೋಂಟದಾರ್ಯ, ಮಾಜಿ ಮೇಯರ್ ಶಿವಕುಮಾರ್, ಮುಖಂಡರಾದ ಅಪ್ಪಣ್ಣ, ಫಣೀಶ್, ಮಂಜುನಾಥ್, ಎಂ.ಶಿವಕುಮಾರ್, ಡಾ.ರೂಪಾ ಇತರರಿದ್ದರು.

ಹೆತ್ತಮಗನ ಮಚ್ಚಿನಿಂದ ಕೊಚ್ಚಿ ಕೊಂದ ತಂದೆ ಸೆರೆ

ಉದಯಕಾಲ ನ್ಯೂಸ್

ಚಿಕ್ಕಮಗಳೂರು: ಮದ್ಯದ ಅಮಲಿನಲ್ಲಿ ತಂದೆಯೇ ಜನ್ಮಕೊಟ್ಟ ಮಗನನ್ನು ಕೊಲೆ ಮಾಡಿರುವ ಅಮಾನುಷ ಘಟನೆ ಮೂಡಿಗೆರೆ ತಾಲೂಕಿನ ಬಾಳೂರು ಹೋಬಳಿಯ ಆನೆಗುಂಡಿ ಗ್ರಾಮದಲ್ಲಿ ನಡೆದಿದೆ

ಆನೆಗುಂಡಿ ಗ್ರಾಮದ ಪ್ರದೀಪ್ ಆಚಾರ್ ಕೊಲೆಯಾದವರು,ಕೃತ್ಯ ನಡೆಸಿ ಮದ್ಯದ ಅಮಲಿನಲ್ಲಿದ್ದ ಮೃತನ ತಂದೆ ರಮೇಶ್ ಆಚಾರ್ ನನ್ನು ಪೊಲೀಸರು ಬಂಧಿಸಿದ್ದಾರೆ.

ಮದ್ಯದ ಅಮಲಿನಲ್ಲಿ ರಮೇಶ್ ಆಚಾರ್ ತನ್ನ ಮಗ ಪ್ರದೀಪ್‌ನ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ ಕೊಲೆಗೈದಿದ್ದಾನೆ. ಗಂಭೀರ ಗಾಯಗೊಂಡ ಪ್ರದೀಪ್ ರಕ್ತದ ಮಡುವಿನಲ್ಲಿ ಬಿದ್ದು ಸಾವನ್ನಪ್ಪಿದ್ದಾನೆ.

ಬಳಿಕ ಮಗನ ಮೃತದೇಹವನ್ನು ಹಾಲ್‌ನಿಂದ ಹೊರಾಂಗಣಕ್ಕೆ ತಂದೆ ತಂದಾಗ ಅಕ್ಕ ಪಕ್ಕದವರು ಆಘಾತಗೊಂಡು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಮದ್ಯಪಾನ ಮಾಡಿ ಆಗಾಗ ಮನೆಯಲ್ಲೇ ತಂದೆ ಮತ್ತು ಮಗ ಗಲಾಟೆ ಮಾಡುತ್ತಿದ್ದರು.

ಒಮ್ಮೊಮ್ಮೆ ಜಗಳ ಅತಿರೇಕಕ್ಕೆ ಹೋಗುತ್ತಿತ್ತು. ಇವರ ಕಾಟದಿಂದ ಬೇಸತ್ತ ಪ್ರದೀಪ್ ತಾಯಿ ಮನೆ ಬಿಟ್ಟು ಹೋಗಿದ್ದರು. ನಂತರ ಮನೆಯಲ್ಲಿ ತಂದೆ?ಮಗ ಇಬ್ಬರೇ ವಾಸವಿದ್ದರು.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜೀತೇಂದ್ರ ಕುಮಾರ್ ದಯಾಮ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಬಾಳೂರು ಪೊಲೀಸರು ಆರೋಪಿಯನ್ನು ಬಂಧಿಸಿ ತನಿಖೆಯನ್ನು ಮುಂದುವರಿಸಲಾಗಿದೆ.

ಪ್ರತಿದಿನ ಉದಯಕಾಲ ಓದಿರಿ

ಸೊಂಟಕ್ಕೆ ಮಗು ಕಟ್ಟಿಕೊಂಡು ಕೆರೆಗೆ ಹಾರಿ ತಾಯಿ ಆತ್ಮಹತ್ಯೆ

ಮಂಗಳೂರು: ತಾಯಿ ಮತ್ತು ಮೂರು ವರ್ಷದ ಮಗುವಿನ ಮೃತದೇಹ ಮನೆ ಸಮೀಪದ ಕೆರೆಯಲ್ಲಿ ಪತ್ತೆಯಾಗಿರುವ ದಾರುಣ ಘಟನೆ ಸುಳ್ಯದ ಬೆಳ್ಳಾರೆ ಬಳಿ ನಡೆದಿದೆ.

ಸುಳ್ಯ ತಾಲೂಕಿನ ಕೊಡಿಯಾಲ ಗ್ರಾಮದ ಆರ್ವಾರ ಹರೀಶ್ ಅವರ ಪತ್ನಿ ಮಧುಶ್ರೀ (34) ಹಾಗೂ ಅವರ ಮಗು ಧನ್ವಿ (3) ಮೃತಪಟ್ಟವರು. ಹರೀಶ್ ಅವರು ತನ್ನ ತಾಯಿ, ಪತ್ನಿ, ಮಗುವಿನೊಂದಿಗೆ ಆರ್ವಾರ ಮನೆಯಲ್ಲಿ ವಾಸಿಸುತ್ತಿದ್ದರು.

ಭಾನುವಾರ ರಾತ್ರಿ ಮನೆಯವರೊಂದಿಗೆ ಕೆಲಸ ಕಾರ್ಯಗಳನ್ನು ಮಾಡಿ ಮಲಗಿದ್ದ ಮಧುಶ್ರೀ, ಬೆಳಗ್ಗೆ ಮಗು ಸಹಿತ ಕಾಣದೇ ಇದ್ದ ವೇಳೆ ಮನೆಯವರು ಎಲ್ಲೆಡೆ ಹುಡುಕಾಟ ನಡೆಸಿದ್ದರು. ಹುಡುಕಾಟದ ವೇಳೆ ಮನೆ ಸಮೀಪದ ಕೆರೆಯಲ್ಲಿ ತಾಯಿ ಹಾಗೂ ಮಗುವಿನ ಮೃತದೇಹ ಪತ್ತೆಯಾಗಿದೆ.

ಮಧುಶ್ರೀ ಅವರು ಮಗುವಿನೊಂದಿಗೆ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಶಂಕಿಸಲಾಗಿದೆ. ಪುತ್ತೂರು ತಾಲೂಕಿನ ಒಳಮೊಗ್ರು ಗ್ರಾಮದವರಾದ ಮಧುಶ್ರೀ ನಾಲ್ಕು ವರ್ಷದ ಹಿಂದೆ ಹರೀಶ್ ಅವರನ್ನು ವಿವಾಹ ಆಗಿದ್ದರು. ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ.

ಮಧುಶ್ರೀ ಅವರು ಕೆರೆಗೆ ಹಾರುವ ಮೊದಲು ಮಗುವಿನೊಂದಿಗೆ ಸಾಯಲು ನಿರ್ಧರಿಸಿ ತನ್ನ ಸೊಂಟಕ್ಕೆ ಮಗುವನ್ನು ಬಟ್ಟೆಯಿಂದ ಕಟ್ಟಿಕೊಂಡು ಕೆರೆಗೆ ಹಾರಿದ್ದಾರೆ. ಕೆರೆಯಲ್ಲಿ ಮೃತದೇಹ ಪತ್ತೆಯಾದಾಗ ಮಗು ತಾಯಿಯನ್ನು ಅಪ್ಪಿಕೊಂಡ ರೀತಿಯಲ್ಲೇ ಪತ್ತೆಯಾಗಿದೆ.

ಮಗಳ ಸಾವಿನಲ್ಲಿ ಅನುಮಾನ ಇದೆ ಎಂದು ಮಧುಶ್ರೀ ತಾಯಿ ರತ್ನಾವತಿ ದೂರು ನೀಡಿದ್ದಾರೆ.ಬೆಳ್ಳಾರೆ ಠಾಣಾ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಆತ್ಮಹತ್ಯೆ ಹಾಗೂ ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದಾರೆ

TATA

ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ನೋಂದಾಯಿತ ಕಚೇರಿ: 11ನೇ ಮಹಡಿ, ಟವರ್ ಎ, ಪೆನಿನ್ಸುಲಾ ಬುಸಿನೆಸ್ ಪಾರ್ಕ್, ಗಣಪತ್ರಾವ್ ಕದಮ್ ಮಾರ್ಗ್, ಲೋವರ್ ಪರೇಲ್ ಮುಂಬೈ – 400 013. ಸಂಪರ್ಕ ಸಂಖ್ಯೆ: (022) 61827414, (022) 61827375

ಶಾಖಾ ವಿಳಾಸ: ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, ನಂ. 82/1, ನೆಲ ಮಹಡಿ, ಕೃಷ್ಣ ಟವರ್ಸ್, ರಿಚ್ಮಂಡ್ ರಸ್ತೆ, ಬೆಂಗಳೂರು–560025

ಸ್ಥಿರ ಆಸ್ತಿಗಳ ಮಾರಾಟಕ್ಕೆ ಸೂಚನೆ

(ನಿಯಮ 8(6)ನ್ನು ಓದಿಕೊಂಡಂತೆ ನಿಯಮ 9(1) ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರ ಅಡಿ)

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 20002ರ ಅಡಿ ನಿಯಮ 8(6) ಮತ್ತು ನಿಯಮ 9(1) ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳೂ, 2002ರ ಅಡಿ ಸ್ಥಿರಾಸ್ತಿಗಳ ಮಾರಾಟಕ್ಕಾಗಿ 15 ದಿನಗಳ ಇ–ಹರಾಜು ಸೂಚನೆ.

ಈ ಮೂಲಕ ನಿರ್ದಿಷ್ಟವಾಗಿ ಸಾಲಗಾರರು ಮತ್ತು / ಸಹ–ಸಾಲಗಾರರು ಅಥವಾ ಅವರ ಕಾನೂನುರೀತ್ಯಾ ಉತ್ತರಾಧಿಕಾರಿಗಳು/ಪ್ರತಿನಿಧಿಗಳಿಗೆ (ಸಾಲಗಾರರು) ಈ ಮೂಲಕ ಸೂಚನೆ ನೀಡುವುದೇನೆಂದರೆ, ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಟಿಸಿಹೆಚ್‌ಎಫ್‌ಎಲ್) ಗೆ ಅಡಮಾನ ಮಾಡಲಾಗಿದ್ದು, ಅದನ್ನು ಅಧಿಕೃತ ಅಧಿಕಾರಿ, ಟಿಸಿಹೆಚ್‌ಎಫ್‌ಎಲ್ ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, ಕೆಳಗೆ ವಿವರಿಸಿರುವ ಸ್ಥಿರ ಆಸ್ತಿಗಳನ್ನು 22.01.2026 ರಂದು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ಮತ್ತು "ಯಾವುದೇ ಅವಲಂಬನೆ ಇಲ್ಲದೆ" ಈ ಕೆಳಗೆ ತಿಳಿಸಲಾದ ಸಾಲಗಾರರು ಮತ್ತು ಸಹ–ಸಾಲಗಾರರಿಂದ ಬರಬೇಕಾದ ಬಾಕಿಗಳ ವಸೂಲಿಗಾಗಿ ಮಾರಾಟ ಮಾಡಲಿರುವರು.

ಮೀಸಲು ಬೆಲೆ ಮತ್ತು ಅರ್ನೆಸ್ಟ್ ಠೇವಣಿ ಹಣವನ್ನು ಈ ಕೆಳಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, ಒಂದು ವೇಳೆ ಹೇಳಲಾದ ಭದ್ರತಾ ಆಸ್ತಿಯ ಮಾರಾಟ ಯಾವುದೇ ರೀತಿಯ ಮುಂದೂಡಿಕೆ/ ಮುಂದುವರಿಕೆ ಇಲ್ಲದೆ ಇದ್ದಲ್ಲಿ ಆಸ್ತಿಯನ್ನು ದಿನಾಂಕ 22.01.2026 ರಂದು ಮಧ್ಯಾಹ್ನ 2.00 ಗಂಟೆಗೆ ಇ–ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಮೊಹರಾದ ಲಕೋಟೆಯಲ್ಲಿ ಇ–ಹರಾಜಿನಲ್ಲಿ ಭಾಗವಹಿಸಲು ಇಎಂಡಿಯನ್ನು ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಅಧಿಕೃತ ಅಧಿಕಾರಿ, ಟಿಸಿಹೆಚ್‌ಎಫ್‌ಎಲ್ ಇವರಿಗೆ 21.01.2026ರಂಧು ಸಂಜೆ 5.00 ಗಂಟೆಯ ಮೊದಲಾಗಿ, ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, ನಂ 82/1, ನೆಲ ಮಹಡಿ, ಕೃಷ್ಣ ಟವರ್ಸ್, ರಿಚ್ಮಂಡ್ ರಸ್ತೆ, ಬೆಂಗಳೂರು – 560025 ಎಂಬ ಶಾಖೆಯ ವಿಳಾಸಕ್ಕೆ ಸಲ್ಲಿಸಬೇಕು. ಭದ್ರತಾ ಸ್ವತ್ತು / ಸ್ಥಿರ ಆಸ್ತಿಯ ಮಾರಾಟವು "ಎಲ್ಲಿ ಯಾವ ರೀತಿ ಇದೆಯೋ ಹಾಗೆ" ಈ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಿದಂತೆ ನಡೆಯಲಿದೆ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ/ಸಹ–ಸಾಲಗಾರರ/ ಕಾನೂನು ರೀತ್ಯಾ ಉತ್ತರಾಧಿಕಾರಿಗಳು/ ಜಾಮೀನುದಾರರ ಹೆಸರು	ತಗಾದೆ ಸೂಚನೆ ದಿನಾಂಕ	ಮೀಸಲು ಬೆಲೆ	ಬಾಕಿ ಮೊತ್ತ
1.	TCHHL04 55000100 072448 & TCHHF04 55000100 072457	ಶ್ರೀ ಚೇತನ್ ಎನ್,ಮೃತರು, ಪ್ರತಿನಿಧಿಸುತ್ತಿರುವ ಇವರ ಕಾನೂನು ರೀತ್ಯಾ ಉತ್ತರಾಧಿಕಾರಿ ಲಕ್ಷ್ಮಿ ಆರ್ ಕೋಂ ಲೇಟ್ ಚೇತನ್ ಶ್ರೀಮತಿ ಲಕ್ಷ್ಮಿ ಆರ್ ಕೋಂ ಲೇಟ್ ಚೇತನ್	ರೂ.2855833/– ಬಾಕಿ ಇದ್ದು ಮತ್ತು ನಿಮ್ಮ ಒಪ್ಪಂದ ಸಂಖ್ಯೆ TCHHF0455000100072457 ಅಡಿಯಲ್ಲಿ ಪಾವತಿಸಬೇಕು ಮತ್ತು ರೂ.878764/– ಮೊತ್ತವನ್ನು ನೀವು ಒಪ್ಪಂದ ಸಂಖ್ಯೆ TCHHL0455000100072448 ಅಡಿಯಲ್ಲಿ ಒಟ್ಟು ರೂ.3734597/– ....23.05.2022.	ರೂ.10,00,000/– ಅರ್ನೆಸ್ಟ್ ಠೇವಣಿ ಹಣ (ಇಎಂಡಿ) ರೂ.1,00,000/– ಸ್ವಾಧೀನತೆ ಸ್ವರೂಪ ಭೌತಿಕ	ರೂ.1499569/– ಬಾಕಿ ಇದ್ದು ಮತ್ತು ನಿಮ್ಮ ಒಪ್ಪಂದ ಸಂಖ್ಯೆ TCHHL0455000100072448 ಅಡಿಯಲ್ಲಿ ಮತ್ತು ರೂ.4809568/– ಮೊತ್ತವನ್ನು ನೀವು ಒಪ್ಪಂದ ಸಂಖ್ಯೆ TCHHF0455000100072457 ಅಡಿಯಲ್ಲಿ ಪಾವತಿಸಬೇಕು. ಒಟ್ಟು ರೂ.6309137/– ....27.12.2025.
ಸ್ಥಿರ ಆಸ್ತಿಯ ವಿವರ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಮನೆ ಆಸ್ತಿಯ ಖಾತಾ ನಂಬರ್ 3033/1253, ಸೈಟ್ ನಂ. 22, ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 60 ಅಡಿ ಒಟ್ಟು ವಿಸ್ತೀರ್ಣ 2400 ಚದರ ಅಡಿಗಳ ಸೈಟ್ ವಾಸಯೋಗ್ಯ ಕಟ್ಟಡದ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 27 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 334/3 ಅಡಿ ಜೊತೆಗೆ ಆರ್‌ಸಿಸಿ, ರೆಡ್‌ಆಕ್ಸೈಡ್ ನೆಲಹಾಸಿನ ಮನೆಯು ವಾರ್ಡ್ ನಂ. 4, 2ನೇ ಸಿದ್ದಪ್ಪಾಜಿ ರಸ್ತೆ, ಹೆಚ್‌ಡಿ ಕೋಟೆ ಪುರಸಭೆ ವ್ಯಾಪ್ತಿ, ಹೆಚ್ ಡಿ ಕೋಟೆ ತಾಲೂಕು ಮತ್ತು ಮೈಸೂರು ಜಿಲ್ಲೆ ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ದೇವೀರಮ್ಮ ನಂಜಯ್ಯ ಕುಟುಂಬಕ್ಕೆ ಸೇರಿದ ಮನೆ, ಪಶ್ಚಿಮಕ್ಕೆ: ಸರಗೂರಯ್ಯ ರವರಿಗೆ ಸೇರಿದ ಮನೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಕೋಟೆ ಕಂಡಕ್ಕಡ ಹಳ್ಳ.					
2.	TCHHL04 55000100 216116 & TCHIN04 55000100 217705	ಶ್ರೀ ಎನ್ ವೆಂಕಟೇಶ್ ಶ್ರೀಮತಿ ಶೈಲಜ	ರೂ.41,54,737/– ಬಾಕಿ ಇದ್ದು ಮತ್ತು ನಿಮ್ಮ ಒಪ್ಪಂದ ಸಂಖ್ಯೆ TCHHL0455000100216116 ಅಡಿಯಲ್ಲಿ ಮತ್ತು ರೂ.2,14,361/– ಮೊತ್ತವನ್ನು ನೀವು ಒಪ್ಪಂದ ಸಂಖ್ಯೆ TCHIN0455000100217705 ಅಡಿಯಲ್ಲಿ ಪಾವತಿಸಬೇಕು.ಒಟ್ಟು ರೂ.43,69,098/– . . .12.12.2024.	ರೂ.54,00,000/– ಅರ್ನೆಸ್ಟ್ ಠೇವಣಿ ಹಣ (ಇಎಂಡಿ) ರೂ.5,40,000/– ಸ್ವಾಧೀನತೆ ಸ್ವರೂಪ ಭೌತಿಕ	ರೂ.4869435/– ಬಾಕಿ ಇದ್ದು ಮತ್ತು ನಿಮ್ಮ ಒಪ್ಪಂದ ಸಂಖ್ಯೆ TCHHL0455000100216116 ಅಡಿಯಲ್ಲಿ ಮತ್ತು ರೂ.257405/–ಮೊತ್ತವನ್ನು ನೀವು ಒಪ್ಪಂದ ಸಂಖ್ಯೆ TCHIN0455000100217705 ಅಡಿಯಲ್ಲಿ ಪಾವತಿಸಬೇಕು. ಒಟ್ಟು ರೂ.5126840/– ....27.12.2025.
ಸ್ಥಿರ ಆಸ್ತಿಯ ವಿವರ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿಯ ಸೈಟ್ ನಂ. 50/1, 50/2, 50/3, ಯರಗಾನಹಳ್ಳಿ ಲೇಔಟ್, ನಜರಾಬಾದ್ ಮೊಹಲ್ಲಾ, ಮೈಸೂರು ನಗರ ಇಲ್ಲಿದ್ದು, ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ; 60 ಅಡಿ, ಒಟ್ಟು ವಿಸ್ತೀರ್ಣ2400 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ; ಆಸ್ತಿ ನಂ. 50 ರಂಗರಾಜಪ್ಪ ರವರ ಆಸ್ತಿ, ಪಶ್ಚಿಮಕ್ಕೆ: ಆಸ್ತಿ ನಂ. 50/4 ಮಹಾದೇವಿಯವರ ಆಸ್ತಿ, ಉತ್ತರಕ್ಕೆ: 25 ಅಡಿ ರಸ್ತೆ, ದಕ್ಷಿಣಕ್ಕೆ; 25 ಅಡಿ ರಸ್ತೆ.					
3.	TCHHL04 55000100 121894	ಶ್ರೀ ಮಧು ಮೋಹನ್ ಟಿ ಶ್ರೀಮತಿ ಸಾವಿತ್ರಿ	ರೂ.67,18,665/– .... 09.05.2024.	ರೂ.65,00,000/– ಅರ್ನೆಸ್ಟ್ ಠೇವಣಿ ಹಣ (ಇಎಂಡಿ) ರೂ.6,50,000/– ಸ್ವಾಧೀನತೆ ಸ್ವರೂಪ ಭೌತಿಕ	ರೂ.8331398/– 27.12.2025
ಸ್ಥಿರ ಆಸ್ತಿಯ ವಿವರ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಮನೆ ಆಸ್ತಿ ನಂ. 11–1–505–27ಎ, (ಹಳೇ ನಂ. 404–150), ಅಸೆಸ್‌ಮೆಂಟ್ ನಂ. 534, ವಾರ್ಡ್ ನಂ. 11, ಗೋಪಾಲಸ್ವಾಮಿ ವಠಾರ ಅಡ್ಡ ರಸ್ತೆ, ಹಾಸನ ಪಟ್ಟಣ, ಹಾಸನ ಜಿಲ್ಲೆ ಇಲ್ಲಿದ್ದು, ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ: 8.839 ಮೀಟರ್, ಉತ್ತರದಿಂದ ದಕ್ಷಿಣಕ್ಕೆ: 24.384 ಮಿಟರ್, ಒಟ್ಟು ವಿಸ್ತೀರ್ಣ 215.33 ಚದರ ಮಿಟರ್ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಜಯಮ್ಮ ರವರ ಮನೆ, ಪಶ್ಚಿಮಕ್ಕೆ: ಹೆಚ್ ಎ ಬೇಲೂರೇಗೌಡ ರವರ ಆಸ್ತಿ, ಉತ್ತರಕ್ಕೆ: ಹೆಚ್‌ಎ ಬೇಲೂರೇಗೌಡ ರವರ ಆಸ್ತಿ, ದಕ್ಷಿಣಕ್ಕೆ: ರಸ್ತೆ.					
4.	TCHIN08 08000100 151192 & TCHHL08 08000100 141770	ಶ್ರೀ ಜಿ ಸಿ ಬಸವರಾಜು ಶ್ರೀಮತಿ ಗೀತಾ ಡಿ ಸಿ	ರೂ.36,77,669/– ಬಾಕಿ ಇದ್ದು ಮತ್ತು ನಿಮ್ಮ ಒಪ್ಪಂದ ಸಂಖ್ಯೆ TCHHL0808000100141770 ಅಡಿಯಲ್ಲಿ ಮತ್ತು ರೂ.1,21,242/– ಮೊತ್ತವನ್ನು ನೀವು ಒಪ್ಪಂದ ಸಂಖ್ಯೆ TCHIN0808000100151192 ಅಡಿಯಲ್ಲಿ ಪಾವತಿಸಬೇಕು. ಒಟ್ಟು ರೂ.37,98,660/– 06.02.2024	ರೂ.25,00,000/– ಅರ್ನೆಸ್ಟ್ ಠೇವಣಿ ಹಣ (ಇಎಂಡಿ) ರೂ.2,50,000/– ಸ್ವಾಧೀನತೆ ಸ್ವರೂಪ ಭೌತಿಕ	ರೂ.5025438/– ಬಾಕಿ ಇದ್ದು ಮತ್ತು ನಿಮ್ಮ ಒಪ್ಪಂದ ಸಂಖ್ಯೆ TCHHL0808000100141770 ಅಡಿಯಲ್ಲಿ ಪಾವತಿಸಬೇಕು ಮತ್ತು ರೂ.230512/– ಮೊತ್ತವನ್ನು ನೀವು ಒಪ್ಪಂದ ಸಂಖ್ಯೆ TCHIN0808000100151192 ಅಡಿಯಲ್ಲಿ ಪಾವತಿಸಬೇಕು. ಒಟ್ಟು ರೂ.5255950/– ..... 27.12.2025.
ಸ್ಥಿರ ಆಸ್ತಿಯ ವಿವರ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ವಾಸಯೋಗ್ಯ ಖಾಲಿ ನಿವೇಶನ ಸಂ. 64, ಗ್ರಾಮ ಪಂಚಾಯತ್ ಖಾತಾ ನಂ. 948/64 (ಹಳೆ ಖಾತಾ ನಂ. 948) ಮತ್ತು ಇ–ಖಾತಾ ನಂ. 152500901200401041 (ಸರ್ವೆ ನಂ. 61/4ಎ ಯಲ್ಲಿ ರಚಿತವಾಗಿದೆ) ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ: 12.20 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: 9.14 ಮೀಟರ್, ಯಲ್ಲಾಪುರ ಗ್ರಾಮ, ಕಸಬಾ ಹೋಬಳಿ, ತುಮಕೂರು ತಾಲೂಕು ಇಲ್ಲಿದ್ದು, ವಿಸ್ತೀರ್ಣ : ಪೂರ್ವಕ್ಕೆ: ಸೈಟ್ ನಂ. 79, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಇತರರ ಭೂಮಿ, ದಕ್ಷಿಣಕ್ಕೆ: ಸೈಟ್ ನಂ. 65.					
5.	TCHHL08 08000100 170541 & TCHIN08 08000100 174433	ಶ್ರೀ ಸತೀಶ ಜಿ ಶ್ರೀಮತಿ ಶ್ವೇತಾ ಕೆ	ರೂ.21,72,975/– ಬಾಕಿ ಇದ್ದು ಮತ್ತು ನಿಮ್ಮ ಒಪ್ಪಂದ ಸಂಖ್ಯೆ TCHHL0808000100170541 ಅಡಿಯಲ್ಲಿ ಪಾವತಿಸಬೇಕು ಮತ್ತು ರೂ.96,973/– ಮೊತ್ತವನ್ನು ನೀವು ಒಪ್ಪಂದ ಸಂಖ್ಯೆ TCHIN0808000100174433 ಅಡಿಯಲ್ಲಿ ಪಾವತಿಸಬೇಕು. ಒಟ್ಟು ರೂ.22,69,948/– 12.05.2025	ರೂ.28,50,000/– ಅರ್ನೆಸ್ಟ್ ಠೇವಣಿ ಹಣ (ಇಎಂಡಿ) ರೂ.2,85,000/– ಸ್ವಾಧೀನತೆ ಸ್ವರೂಪ : ಭೌತಿಕ	ರೂ.2406924/– ಬಾಕಿ ಇದ್ದು ಮತ್ತು ನಿಮ್ಮ ಒಪ್ಪಂದ ಸಂಖ್ಯೆ TCHHL0808000100170541ಅಡಿಯಲ್ಲಿ ಪಾವತಿಸಬೇಕು ಮತ್ತು ರೂ.112041/– ಮೊತ್ತವನ್ನು ನೀವು ಒಪ್ಪಂದ ಸಂಖ್ಯೆ TCHIN0808000100174433 ಅಡಿಯಲ್ಲಿ ಪಾವತಿಸಬೇಕು. ಒಟ್ಟು ರೂ.2518965/– 27.12.2025
ಸ್ಥಿರ ಆಸ್ತಿಯ ವಿವರ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ವಾಸಯೋಗ್ಯ ಖಾಲಿ ನಿವೇಶನ ಸಂ. 18, ಮುನ್ಸಿಪಲ್ ಖಾತಾ ನಂ. 5308/5013/18 (ಹಳೆ ಖಾತಾ ನಂ. 5308/5013/18 (ಹಳೆ ಖಾತಾ ನಂ. 5013/4576/18) ಮತ್ತು ಪಿಐಡಿ ನಂ. 25–510–190 (ಸರ್ವೆ ನಂ.53/1), ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ :9.144018 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ : 14.325629 ಮೀಟರ್‌ಗಳು, ವಾರ್ಡ್ ನಂ. 1, ವಿದ್ಯಾನಗರ ಎಕ್ಸ್‌ಟೆನ್ಶನ್ ಗುಬ್ಬಿ ಪಟ್ಟಣ ತುಮಕೂರು ಜಿಲ್ಲೆ ಇಲ್ಲಿದುದ ಮಮತ್ತು ಚಕ್ಕುಬಂದಿ ಈ ರೀತಿಯಾಗಿದೆ : ಪೂರ್ವಕ್ಕೆ : ಸೈಟ್ ನಂ. 17, ಪಶ್ಚಿಮಕ್ಕೆ : ಸೈಟ್ ನಂ. 19, ಉತ್ತರಕ್ಕೆ : ಕೆ ಎಂ ಎಫ್ ಆವರಣ, ದಕ್ಷಿಣಕ್ಕೆ : ರಸ್ತೆ 30 ಅಡಿ.					

ಸೂಚನೆ : ಬಿಡ್‌ದಾರರು ಬಿಡ್ ಸಲ್ಲಿಸುವ ಮೊದಲು ಪರಿಶೀಲನೆ ನಡೆಸಲು ಸಲಹೆ ನೀಡಲಾಗಿದೆ. ಯಾವುದೇ ವ್ಯಾಜ್ಯ, ವಿವಾದಗಳು ಇದ್ದಲ್ಲಿ ಹಾಗೇಯೇ ಹರಾಜನ್ನು ನಡೆಸಲಾಗುವುದು.
ಹರಾಜಿನಲ್ಲಿ, ಸಾರ್ವಜನಿಕರು ಸಾಮಾನ್ಯವಾಗಿ ತಮ್ಮ ಬಿಡ್(ಗಳನ್ನು) ಖುದ್ದಾಗಿ ಸಲ್ಲಿಸಲು ಆಹ್ವಾನಿಸಲಾಗುತ್ತದೆ. ಈ ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ಹೊಂದಿರುವ ಯಾವುದೇ ಅಧಿಕಾರಿ ಅಥವಾ ಇತರ ವ್ಯಕ್ತಿಗಳು ಮಾರಾಟವಾದ ಸ್ಥಿರ ಆಸ್ತಿಯಲ್ಲಿ ಯಾವುದೇ ಹಿತಾಸಕ್ತಿಯನ್ನು ನೇರವಾಗಿ ಅಥವಾ ಪರೋಕ್ಷವಾಗಿ ಬಿಡ್ ಮಾಡಬಾರದು, ಸ್ವಾಧೀನಪಡಿಸಿಕೊಳ್ಳಬಾರದು ಅಥವಾ ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸಬಾರದು.
ಮಾರಾಟವು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರಲ್ಲಿ ಸೂಚಿಸಲಾದ ಷರತ್ತುಗಳಿಗೆ ಮತ್ತು ಈ ಕೆಳಗಿನ ಹೆಚ್ಚಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ:
ಗಮನಿಸಿ: ಇ–ಹರಾಜು 22.01.2026 ರಂದು ಮಧ್ಯಾಹ್ನ 2.00 ರಿಂದ ಮಧ್ಯಾಹ್ನ 3.00 ರ ನಡುವೆ https://auctionbazaar.com ಪೋರ್ಟಲ್ ಮೂಲಕ ತಲಾ 5 ನಿಮಿಷಗಳ ಸೀಮಿತ ವಿಸ್ತರಣೆಯೊಂದಿಗೆ ನಡೆಯುತ್ತದೆ.
ನಿಯಮಗಳು ಮತ್ತು ನಿಬಂಧನೆಗಳು:
1. ಕೆಳಗೆ ನೀಡಲಾದ ಷೆಡ್ಯೂಲ್‌ನಲ್ಲಿ ನಿರ್ದಿಷ್ಟಪಡಿಸಿದ ವಿವರಗಳು ಕೆಳಗೆ ಸಹಿದಾರರಿಗೆ ತಿಳಿದ ಅತ್ಯುತ್ತಮ ಮಾಹಿತಿಯಾಗಿದೆ. ಆದರೆ ಈ ಘೋಷಣೆಯಲ್ಲಿನ ಯಾವುದೇ ದೋಷ, ತಪ್ಪು ಹೇಳಿಕೆ ಅಥವಾ ಲೋಪಕ್ಕೆ ಕೆಳಗೆ ಸಹಿ ಮಾಡಿದವರು ಜವಾಬ್ದಾರರಾಗಿರುವುದಿಲ್ಲ. ಬಿಡ್ ಮೊತ್ತದ ಬಗ್ಗೆ ಅಥವಾ ಬಿಡ್ದಾರರಿಗೆ ಸಂಬಂಧಿಸಿದಂತೆ ಯಾವುದೇ ವಿವಾದ ಉಂಟಾದರೆ, ಸ್ಥಿರ ಆಸ್ತಿಯನ್ನು ಅಧಿಕೃತ ಅಧಿಕಾರಿಯ ವಿವೇಚನೆಗೆ ಒಳಪಟ್ಟು ಮತ್ತೊಮ್ಮೆ ಹರಾಜಿಗೆ ಇಡಲಾಗುತ್ತದೆ. 2. ಸ್ಥಿರ ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದಿಲ್ಲ. 3. ಬಿಡ್ ಹೆಚ್ಚಳದ ಮೊತ್ತ: ರೂ. 10,000/– (ಹತ್ತು ಸಾವಿರ ರೂಪಾಯಿಗಳು ಮಾತ್ರ). 4. ಆಸ್ತಿಯನ್ನು ಖರೀದಿಸಲು ಸಲ್ಲಿಸಲಾದ ಎಲ್ಲಾ ಬಿಡ್‌ಗಳೊಂದಿಗೆ ಇಎಂಡಿಯನ್ನು ಡಿಮ್ಯಾಂಡ್ ಡ್ರಾಫ್ಟ್ ಮೂಲಕ "ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್" ಪರವಾಗಿ ಪಡೆದು ಮೇಲೆ ತಿಳಿಸಿದಂತೆ ಶಾಖೆಯ ವಿಳಾಸಕ್ಕೆ ಪಾವತಿಸಬೇಕು. ಹರಾಜಿನ ನಂತರ ವಿಫಲ ಬಿಡ್‌ದಾರರಿಗೆ ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಹಿಂತಿರುಗಿಸಲಾಗುತ್ತದೆ. ಎನ್‌ಇಎಫ್‌ಟಿ/ಆರ್‌ಟಿಜಿಎಸ್/ಐಎಂಪಿಎಸ್ ಮೂಲಕ ಇಎಂಡಿ ಪಾವತಿಗಾಗಿ, ದಯವಿಟ್ಟು ಅಧಿಕೃತ ಅಧಿಕಾರಿಯನ್ನು ಸಂಪರ್ಕಿಸಿ. 5. ಅತ್ಯಧಿಕ ಬಿಡ್‌ದಾರನು ಕಾನೂನುಬದ್ಧವಾಗಿ ಬಿಡ್ ಮಾಡಲು ಅರ್ಹನಾಗಿದ್ದರೆ ಮತ್ತು ಬಿಡ್ ಮೊತ್ತವು ಮೀಸಲು ಬೆಲೆಗಿಂತ ಕಡಿಮೆಯಿಲ್ಲದಿದ್ದರೆ, ಅವರನ್ನು ಯಶಸ್ವಿ ಬಿಡ್‌ದಾರ ಎಂದು ಘೋಷಿಸಲಾಗುತ್ತದೆ. ನೀಡಲಾದ ಬೆಲೆಯು ಅಸಮರ್ಪಕವಾಗಿ ಕಂಡುಬಂದರೆ, ಅತ್ಯಧಿಕ ಬಿಡ್ ಅನ್ನು ಸ್ವೀಕರಿಸಲು ನಿರಾಕರಿಸುವುದು ಅಧಿಕೃತ ಅಧಿಕಾರಿಯ ವಿವೇಚನೆಗೆ ಒಳಪಟ್ಟಿರುತ್ತದೆ. 6. ದಾಖಲಾದ ಕಾರಣಗಳಿಗಾಗಿ, ಮಾರಾಟವನ್ನು ಮುಂದೂಡುವುದು/ನಿಲ್ಲಿಸುವುದು ಅಧಿಕೃತ ಅಧಿಕಾರಿಯ ವಿವೇಚನೆಗೆ ಬಿಟ್ಟದ್ದು. 7. ಸ್ಥಿರ ಆಸ್ತಿಯ ಪರಿಶೀಲನೆಯನ್ನು ದಿನಾಂಕ 12.01.2026 ರಂದು ಬೆಳಿಗ್ಗೆ 11 ರಿಂದ ಸಂಜೆ 5.00 ರವರೆಗೆ ಪೂರ್ವಾನುಮತಿ ಪಡೆದು ಪರಿಶೀಲಿಸಬಹುದು. 8. ಯಶಸ್ವಿ ಬಿಡ್ಡರ್ ಎಂದು ಘೋಷಿಸಲ್ಪಟ್ಟ ವ್ಯಕ್ತಿಯು, ಅಂತಹ ಘೋಷಣೆಯ ನಂತರ, ಇಎಂಡಿ ಮೊತ್ತವನ್ನು ಒಳಗೊಂಡಿರುವ ಖರೀದಿ ಹಣ/ಬಿಡ್‌ನ ಮೊತ್ತದ ಇಪ್ಪತ್ತೈದು ಪ್ರತಿಶತವನ್ನು ಅಧಿಕೃತ ಅಧಿಕಾರಿಗೆ 24 ಗಂಟೆಗಳ ಒಳಗೆ ಠೇವಣಿ ಇಡಬೇಕು ಮತ್ತು ಅಂತಹ ಠೇವಣಿಯನ್ನು ಪಾವತಿಸದಿದ್ದಲ್ಲಿ, ಆಸ್ತಿಯನ್ನು ತಕ್ಷಣವೇ ಪ್ರೈವೇಟ್ ಟ್ರೀಟಿ ಮೂಲಕ ಹೊಸ ಹರಾಜು/ಮಾರಾಟಕ್ಕೆ ಇಡಲಾಗುತ್ತದೆ. 9. ಮೇಲೆ ತಿಳಿಸಿದಂತೆ ಆರಂಭಿಕ ಠೇವಣಿ ಮಾಡಿದ್ದರೆ, ಖರೀದಿದಾರರು ಖರೀದಿ ಹಣದ ಬಾಕಿ ಮೊತ್ತವನ್ನು ಆಸ್ತಿಯ ಮಾರಾಟ ದೃಢೀಕರಣದ ದಿನಾಂಕದಿಂದ 15 ನೇ ದಿನದಂದು ಅಥವಾ ಅದಕ್ಕಿಂತ ಮೊದಲು, ಆ ದಿನವನ್ನು ಹೊರತುಪಡಿಸಿ, ಅಥವಾ 15 ನೇ ದಿನವು ಭಾನುವಾರ ಅಥವಾ ಇತರ ರಜಾದಿನವಾಗಿದ್ದರೆ, 15 ನೇ ದಿನದ ನಂತರದ ಮೊದಲ ಕಚೇರಿ ದಿನದಂದು ಅಧಿಕೃತ ಅಧಿಕಾರಿಗಳಿಗೆ ಪಾವತಿಸಬೇಕು. 10. ಮೇಲೆ ತಿಳಿಸಿದ ಅವಧಿಯೊಳಗೆ ಯಾವುದೇ ಪಾವತಿಯನ್ನು ಪಾವತಿಸಲು ವಿಫಲವಾದರೆ, ಆಸ್ತಿಯನ್ನು ಖಾಸಗಿ ಒಪ್ಪಂದದ ಮೂಲಕ ಹೊಸ ಹರಾಜು/ಮಾರಾಟಕ್ಕೆ ಇಡಲಾಗುತ್ತದೆ. ಇಎಂಡಿ ಸೇರಿದಂತೆ ಠೇವಣಿಯನ್ನು ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಮುಟ್ಟುಗೋಲು ಹಾಕಿಕೊಳ್ಳುತ್ತದೆ ಮತ್ತು ತಪ್ಪಿತಸ್ಥ ಖರೀದಿದಾರರು ಆಸ್ತಿಯ ಮೇಲಿನ ಎಲ್ಲಾ ಹಕ್ಕುಗಳನ್ನು ಕಳೆದುಕೊಳ್ಳುತ್ತಾರೆ. 11. ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ಗೆ ತಿಳಿದಿರುವ ಯಾವುದೇ ಋಣಭಾರಗಳ ವಿವರಗಳು, ಆಸ್ತಿಯು ಹೊಣೆಗಾರನಾಗಿರುತ್ತದೆ: ಮೇಲಿನ ಕೋಷ್ಟಕದ ಪ್ರಕಾರ. ಆಸ್ತಿ ತೆರಿಗೆ, ವಿದ್ಯುತ್ ಇತ್ಯಾದಿಗಳ ಶಾಸನಬದ್ಧ ಹೊಣೆಗಾರಿಕೆಗಳ ವಿಸ್ತೀರ್ಣ ಸೇರಿದಂತೆ ಆಸ್ತಿಯ ಮೇಲಿನ ಋಣಭಾರಗಳ ಬಗ್ಗೆ ಉದ್ದೇಶಿತ ಬಿಡ್ದಾರರು ತಮ್ಮದೇ ಆದ ಸ್ವತಂತ್ರ ವಿಚಾರಣೆಗಳನ್ನು ಮಾಡಲು ಸೂಚಿಸಲಾಗಿದೆ. 12. ಯಾವುದೇ ಇತರ ವಿವರಗಳಿಗಾಗಿ ಅಥವಾ ಇ–ಹರಾಜಿನ ಕುರಿತು ಆನ್‌ಲೈನ್ ತರಬೇತಿಗಾಗಿ ಸಂಭಾವ್ಯ ಬಿಡ್ಡರ್‌ಗಳು ಸೇವಾ ಪೂರೈಕೆದಾರರಾದ ಮೆ॥ ಅರ್ಕ ಇ–ಮಾರ್ಟ್ ಪ್ರೈವೇಟ್ ಲಿಮಿಟೆಡ್, 6–3–1090/1/1, 2ನೇ ಮಹಡಿ, ಪಾರ್ಟ್ ಬಿ, ಉಮ ಹೈದರಾಬಾದ್ ಹೌಸ್, ರಾಜ್‌ಭವನ್ ರಸ್ತೆ, ಸೋಮಜಿಗುಡ, ಹೈದರಾಬಾದ್–500082. ಇಮೇಲ್ ಐಡಿ: contact@auctionbazaar.com/support@auctionbazaar.com ಅಥವಾ ಮನೀಶ್ ಬೋನ್ಸಾಯ್, ಇಮೇಲ್ ಐಡಿ Manish.Bansal@tatacapital.com ಅಧಿಕೃತ ಅಧಿಕಾರಿ ಮೊಬೈಲ್ ಸಂಖ್ಯೆ 8588983696. ದಯವಿಟ್ಟು ನಿಮ್ಮ ಪ್ರಶ್ನೆಯನ್ನು WhatsApp ಸಂಖ್ಯೆ – 9999078669 ಗೆ ಕಳುಹಿಸಿ. 13. 1% ಟಿಡಿಎಸ್ ಅನ್ವಯವಾಗುತ್ತದೆ ಮತ್ತು ಅತ್ಯಧಿಕ ಬಿಡ್ ಮೊತ್ತಕ್ಕಿಂತ ಅತ್ಯಧಿಕ ಬಿಡ್ದಾರರು ಪಾವತಿಸಬೇಕಾಗುತ್ತದೆ. ಅತ್ಯಧಿಕ ಬಿಡ್ದಾರರು ಮಾಲೀಕರು/ಸಾಲಗಾರರ ಪ್ಯಾನ್‌ನಲ್ಲಿ ಪಾವತಿಯನ್ನು ಠೇವಣಿ ಮಾಡಬೇಕಾಗುತ್ತದೆ ಮತ್ತು ಚಲನ್‌ನ ಪ್ರತಿಯನ್ನು ನಮ್ಮ ಕಂಪನಿಗೆ ಸಲ್ಲಿಸಬೇಕು. 14. ಮೇಲಿನ ವಿವರಗಳಿಗಾಗಿ ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್ https://surl.li/leufhr ನಲ್ಲಿ ಒದಗಿಸಲಾದ ಕೆಳಗಿನ ಲಿಂಕ್ ಅನ್ನು ನೋಡಿ. 15. ದಯವಿಟ್ಟು ಲಿಂಕ್‌ಗೆ ಭೇಟಿ ನೀಡಿ: https://www.tatacapital.com/property-disposal.html.
ದಯವಿಟ್ಟು ಗಮನಿಸಿ – ಈ ಆಸ್ತಿಯ ಮಾರಾಟ/ಹರಾಜಿಗಾಗಿ ಟಿಸಿಹೆಚ್‌ಎಫ್‌ಎಲ್ ಉಲ್ಲೇಖಿಸಲಾದ ಹರಾಜು ಪಾಲುದಾರರನ್ನು ಹೊರತುಪಡಿಸಿ ಯಾವುದೇ ದಲ್ಲಾಳಿ/ಏಜೆಂಟರನ್ನು ನೇಮಿಸಿಕೊಂಡಿಲ್ಲ. ಈ ವಿಷಯದ ಬಗ್ಗೆ ಎಲ್ಲಾ ಪ್ರಶ್ನೆಗಳು ಮತ್ತು ವಿಚಾರಣೆಗಳಿಗಾಗಿ ಆಸಕ್ತರು ಕೆಳಗೆ ಸಹಿ ಮಾಡಿದವರು ಅಥವಾ ಅಧಿಕೃತ ಅಧಿಕಾರಿಯನ್ನು ಮಾತ್ರ ಸಂಪರ್ಕಿಸಬೇಕು.

ಸ್ಥಳ: ಮೈಸೂರು, ಹಾಸನ, ತುಮಕೂರು, ಕರ್ನಾಟಕ
ದಿನಾಂಕ: 06.01.2026

ಸಹಿ/– ಅಧಿಕೃತ ಅಧಿಕಾರಿ,
ಟಾಟಾ ಕ್ಯಾಪಿಟಲ್ ಹೌಸಿಂಗ್ ಫೈನಾನ್ಸ್ ಲಿ.

ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಕೃಷ್ಣರಾಜಪೇಟೆ, ಮಂಡ್ಯ ಜಿಲ್ಲೆ.
ಕ್ರಿಮಿನಲ್ ಸಂಕೀರ್ಣ ಅರ್ಜಿ ಸಂಖ್ಯೆ: 171/2025

ಅರ್ಜಿದಾರರು: 1) ಆರ್.ಕೆ. ಅಶೋಕ ಬಿನ್ ಲೇಟ್ ಕೆಂಪೇಗೌಡ, ಸುಮಾರು 47 ವರ್ಷ ವಯಸ್ಸು, 2) ಆರ್. ಕೆ. ಮಂಜೇಗೌಡ ಬಿನ್ ಲೇಟ್ ಕೆಂಪೇಗೌಡ ಸುಮಾರು 45 ವರ್ಷ ವಯಸ್ಸು, ಇಬ್ಬರೂ ವಾಸ: ರಾಮನಹಳ್ಳಿ ಗ್ರಾಮ, ಶೀಳನೆರೆ ಹೋಬಳಿ, ಕೃಷ್ಣರಾಜಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ

:ವಿರುದ್ಧ:

ಎದುರುದಾರರು: ಮಾನ್ಯ ತಹಶೀಲ್ದಾರ್ ಕೃಷ್ಣರಾಜಪೇಟೆ ತಾಲ್ಲೂಕು ಕಛೇರಿ, ಕೃಷ್ಣರಾಜಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.

:ಪತ್ರಿಕಾ ಪ್ರಕಟಣೆ:

ಮಾನ್ಯ ಘನ ನ್ಯಾಯಾಲಯದಲ್ಲಿ 1 ಮತ್ತು 2ನೇ ಅರ್ಜಿದಾರರುಗಳು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಅರ್ಜಿದಾರರ ತಾಯಿಯಾದ ಸರೋಜಮ್ಮ ಕೋಂ ಕೆಂಪೇಗೌಡ ರವರು ಇದೇ ಮಂಡ್ಯ ಜಿಲ್ಲೆ, ಕೆ.ಆರ್. ಪೇಟೆ ತಾಲ್ಲೂಕು, ಶೀಳನೆರೆ ಹೋಬಳಿ, ರಾಮನಹಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ದಿನಾಂಕ: 25–09–1991 ರಂದು ಮರಣ ಹೊಂದಿರುತ್ತಾರೆ. ಆದ್ದರಿಂದ ಸದರಿ ಸರೋಜಮ್ಮ ಕೋಂ ಕೆಂಪೇಗೌಡ ರವರ ಇತರೆ ವಾರಸುದಾರರು ಯಾರಾದರೂ ಇದ್ದರೆ ಮತ್ತು ಅವರ ಮರಣ ದಿನಾಂಕಕ್ಕೆ ಸಂಬಂಧಿಸಿದಂತೆ ತಕರಾರು ಇದ್ದರೆ ಅವರುಗಳು ದಿನಾಂಕ: 05–02–2026 ರಂದು ಬೆಳಿಗ್ಗೆ 11–00 ಗಂಟೆಗೆ ಸದರಿ ನ್ಯಾಯಾಲಯದಲ್ಲಿ ತಾವುಗಳು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು ಎಂದು ತಿಳಿಸಲಾಗಿದೆ.

ಘನ ನ್ಯಾಯಾಲಯದ ದಸ್ತಸ್ತಿನೊಂದಿಗೆ ದಿನಾಂಕ: 05–01–2026 ರಂದು ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/– ಶಿರಸ್ತೇದಾರರು
ಸಿವಿಲ್ ನ್ಯಾಯಾಲಯ(ಕಿ.ಶ್ರೇ) ಕೃಷ್ಣರಾಜಪೇಟೆ

ಅರ್ಜಿದಾರರ ಪರ ವಕೀಲರು
ಡಿ.ಆರ್. ಮೋಹನ್, ವಕೀಲರು,
ಅಗ್ನಿಶಾಮಕ ಠಾಣೆ ಎದುರು, ಕೆ.ಆರ್.ಪೇಟೆ

ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

ನೋಂದಾಯಿತ ಕಚೇರಿ: ಗ್ರೇಪ್ ಗಾರ್ಡನ್, ನಂ. 27, 3ನೇ ಎ ಕ್ರಾಸ್, 18ನೇ ಮೈನ್ ಕೋರಮಂಗಲ 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560095
ಶಾಖಾ ಕಚೇರಿ: ನಂ.1200/1132/5852 & ನಂ. 1200/1132/5852/1, ಅಂಬೇಡ್ಕರ್ ರಸ್ತೆ, ಕೆ ಆರ್ ಎಕ್ಸ್‌ಟೆನ್ಶನ್ ರಂಗಪ್ಪನಪಾಳ್ಯ, ಶಿರಾ ಕರ್ನಾಟಕ–572137.

ಇ–ಹರಾಜು ಮಾರಾಟ ಸೂಚನೆ

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್, 2002ನ್ನು ಓದಿಕೊಂಡಂತೆ ನಿಯಮ 8(6) ಮತ್ತು 9(1) ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ಅನ್ವಯ ಇ–ಹರಾಜು ಮಾರಾಟ ಪ್ರಕಟಣೆ
ಕೆಳಸಹಿದಾರರು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಅಧಿಕೃತ ಅಧಿಕಾರಿಯಾಗಿದ್ದು, ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4)ರ ಸರ್ಫೇಸಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸ್ವಾಧೀನಪಡಿಸಿಕೊಂಡಿರುತ್ತಾರೆ. ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಪಟ್ಟಿ ಮಾಡಿರುವ ಸ್ಥಿರಾಸ್ತಿಗಳನ್ನು ಬ್ಯಾಂಕ್ ಗೆ ಬರಬೇಕಾಗಿರುವ ಬಾಕಿ ಹಣದ ವಸೂಲಾತಿಗಾಗಿ "ಎಲ್ಲಿ ಹೇಗಿದೆಯೋ ಹಾಗೆ", "ಏನಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ಆಧಾರದ ಮೇಲೆ ಈ ಕೆಳಗೆ ಹೆಸರಿಸಿರುವ ದಿನಾಂಕ ಮತ್ತು ಸಮಯದಂದು ಮಾರಾಟ ಮಾಡಲಿರುವರು.

ಸಾಲದ ಖಾತಾ ಸಂ. ಸಾಲಗಾರರ/ಸಹ–ಸಾಲಗಾರರ/ ಜಾಮೀನುದಾರರ ಹೆಸರು	(1) 13(2) ನೋಟೀಸ್ ದಿನಾಂಕ & ತಗಾದೆ ಮೊತ್ತ (2) ಸ್ವಾಧೀನತೆ ದಿನಾಂಕ	ಪ್ರಸಕ್ತ ಬಾಕಿ ಉಳಿಕೆ	ಅರ್ನೆಸ್ಟ್ ಠೇವಣಿ ಹಣ (ಇಎಂಡಿ) ಐಎನ್‌ಆರ್ ನಲ್ಲಿ	ಮೀಸಲು ಬೆಲೆ ಐಎನ್‌ಆರ್ ನಲ್ಲಿ
1156210080000002 1. ನಂದಿನಿ 2. ಶ್ರೀ ಉಮೇಶ್ ಬಿ ವಿ 3. ಶ್ರೀ ಚಂದ್ರಶೇಖರ್	(1) 27.11.2021 & ರೂ.8,19,739/– (ಎಂಟು ಲಕ್ಷ ಹತ್ತೊಂಭತ್ತು ಸಾವಿರದ ಏಳುನೂರ ಮೂವತ್ತೊಂಭತ್ತು ರೂಪಾಯಿ ಮಾತ್ರ) 27.11.2021 ರಂತೆ (2) ಸಾಂಕೇತಿಕ ಸ್ವಾಧೀನತೆ: 13.12.2022 ಭೌತಿಕ ಸ್ವಾಧೀನತೆ: 26.04.2025	ರೂ.19,27,997.74 (ಹತ್ತೊಂಭತ್ತು ಲಕ್ಷ ಇಪ್ಪತ್ತೇಳು ಸಾವಿರದ ಒಂಭೈನ್ನೂರ ತೊಂಭತ್ತೇಳು ರೂಪಾಯಿ ಮತ್ತು ಪೈಸೆ ಎಪ್ಪತ್ತನಾಲ್ಕು ಮಾತ್ರ) 15.12.2025 ರಂತೆ	₹ 10,80,000/- (ಹತ್ತು ಲಕ್ಷ ಎಂಭತ್ತು ಸಾವಿರ ರೂಪಾಯಿ ಮಾತ್ರ)	₹ 1,08,000/- (ಒಂದು ಲಕ್ಷ ಎಂಟು ಸಾವಿರ ರೂಪಾಯಿ ಮಾತ್ರ)

ಆಸ್ತಿ ವಿವರ / ಷೆಡ್ಯೂಲ್ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿಯು ವಾರ್ಡ್ ನಂ. 4, ಜ್ಯೋತಿನಗರ, ಶಿರಾ ಪಟ್ಟಣ, ಸೈಟ್ ನಂ. 37 ಇಲ್ಲಿದ್ದು, ಸರ್ವೆ ನಂ. 37 ರಲ್ಲಿ ರಚಿತವಾಗಿದ್ದು, ಖಾತಾ ನಂ. 3829/2917/7246 (ಹಳೆ ಖಾತಾ ನಂ. 2917/7246). ವಿಸ್ತೀರ್ಣ : ಪೂರ್ವದಿಂದ ಪಶ್ಚಿಮದ ಕಡೆಗೆ : 25 ಅಡಿ ಮತ್ತು ಉತ್ತರದಿಂಧ ದಕ್ಷಿಣದ ಕಡೆಗೆ : 24 ಅಡಿ ಅಂದರೆ 25'X24' ಅಡಿ. ಚಕ್ಕುಬಂಧಿ : ಪೂರ್ವಕ್ಕೆ : ಸೈಟ್ ನಂ. 36, ಪಶ್ಚಿಮಕ್ಕೆ : ಸಿ.ಎಂ.ಸಿ ರಸ್ತೆ, ಉತ್ತರಕ್ಕೆ : ಸೈಟ್ ನಂ. 38, ದಕ್ಷಿಣಕ್ಕೆ : ಸೈಟ್ ನಂ. ಸಿ.ಎಂ.ಸಿ ರಸ್ತೆ. ಒಟ್ಟಾಗಿ ಭೂಮಿ ಮತ್ತು ಕಟ್ಟಡ ಹಾಗೂ ಎಲ್ಲಾ ಅಪ್ಪುರ್ಟೆಂಟ್‌ಗಳು ಇದರಲ್ಲಿರುವುದು ಸೇರಿದಂತೆ.
ಆಸ್ತಿಯು ಶ್ರೀ ಚಂದ್ರಶೇಖರ್ ರವರ ಮಾಲೀಕತ್ವದಲ್ಲಿದೆ (ನಿಮ್ಮಲ್ಲಿ ಕ್ರಸಂ. 3 ನೆಯವರು)

ಇ–ಹರಾಜಿನ ದಿನಾಂಕ ಮತ್ತು ಸಮಯ: 23.01.2025, ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ

ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ಆಸ್ತಿ ಪರಿವೀಕ್ಷಣೆ ದಿನಾಂಕ ಮತ್ತು ಸಮಯ
22.01.2026ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ರ ನಡುವೆ	21.01.2026 ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ರ ನಡುವೆ

ಹೆಚ್ಚಿನ ಮಾಹಿತಿಗಾಗಿ ಬ್ಯಾಂಕ್‌ನ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಿ:
ಶ್ರೀ ನವರತ್ನ ಕುಮಾರ್ – 96633 84014 / ಶ್ರೀ ಟಿಜೊ ಎಮ್ ಸಾಜನ್ – 78451 92961

ಹರಾಜನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ನಡೆಸಲಾಗುವುದು
ಹರಾಜನ್ನು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅನುಮೋದಿತ ಇ–ಹರಾಜು ಸೇವಾ ಪೂರೈಕೆದಾರ – ಮೆ॥ ಸಿ1 ಇಂಡಿಯ ಪ್ರೈ. ಲಿ., ಮೂಲಕ ನಡೆಸಲಾಗುವುದು. ಸಂಪರ್ಕ ವ್ಯಕ್ತಿ: ಶ್ರೀ ಪ್ರಭಾಕರನ್ (ಮೊ. ಸಂ. 74182 81709). ಅಪೇಕ್ಷಿತ ಬಿಡ್ಡುದಾರರು https://www.bankeauctions.com ಅಥವಾ https://www.ujjivanfb.in/e-auctions ಗೆ ಭೇಟಿ ನೀಡಿ ಆಸ್ತಿಗಳ ಹೆಚ್ಚಿನ ವಿವರಗಳನ್ನು ತಿಳಿದುಕೊಂಡು, ಬಿಡ್‌ನಲ್ಲಿ ಭಾಗವಹಿಸಬಹುದು ಹಾಗೂ ಅವರು ತಮ್ಮ ಹೆಸರನ್ನು https://www.bankeauctions.com ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಉಚಿತವಾಗಿ ತಮ್ಮ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬಹುದು. ಅಪೇಕ್ಷಿತ ಬಿಡ್ಡುದಾರರು ಇಹರಾಜು ಬಗ್ಗೆ ಆನ್‌ಲೈನ್ ತರಬೇತಿಯನ್ನು ಸೇವಾ ಪೂರೈಕೆದಾರರಾದ ಮೆ॥ ಸಿ1 ಇಂಡಿಯ ಪ್ರೈ.ಲಿ., ಸಹಾಯವಾಣಿ ಸಂ.7291918824, 25, 26, ಸಪೋರ್ಟ್ ಇ–ಮೇಲ್ ಐಡಿ : support@bankeauctions.com ಹರಾಜು ಪೋರ್ಟಲ್ : https://www.bankeauctions.com.
ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಬ್ಯಾಂಕ್ / ಪೂರಕ ಭದ್ರತಾದಾರರ ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್‌ನ್ನು ಆಧಾರ ಮಾಡಿಕೊಳ್ಳಿ
i.e., https://www.ujjivansfb.in/e-auctions / https://www.bankeauctions.com.

ಸಹಿ/–
ದಿನಾಂಕ: 06.01.2026, ಸ್ಥಳ: ತುಮಕೂರು
ಅಧಿಕೃತ ಅಧಿಕಾರಿ, ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

यूनियन बैंक ऑफ इंडिया Union Bank of India
भारत सरकार का उपक्रम A Government of India Undertaking

ಅಸೆಟ್ ರಿಕವರಿ ಶಾಖೆ ಬೆಂಗಳೂರು ಉತ್ತರ, ನಂ.1234, 1ನೇ ಮಹಡಿ, 4ನೇ ಮೇನ್, ಚಂದ್ರಾ ಲೇಔಟ್ ಬಸ್ ನಿಲ್ದಾಣ ಎದುರು, ಚಂದ್ರಾ ಲೇಔಟ್, ಬೆಂಗಳೂರು – 560 040. ಮೊಬೈಲ್: 90032 23669, Mail ID: arb.bengalurunorth@unionbankofindia.bank

ಇ–ಹರಾಜು ಮಾರಾಟದ ನೋಟೀಸ್

ಪ್ರೊವಿಜೋ ನಿಯಮ 8 ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟಕ್ಕೆ 15 ದಿನಗಳ ನೋಟೀಸ್
ಸಾರ್ವಜನಿಕವಾಗಿ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ಮತ್ತು ಜಾಮೀನುದಾರರಾದ ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತನ್ನು ಭದ್ರತಾ ಸಾಲಗಾರರಿಗೆ ಅಡಮಾನ/ಚಾರ್ಜ್ ಮಾಡಲಾಗಿದೆ. ಸೆಕ್ಯೂರ್ಡ್ ಕ್ರೆಡಿಟರ್ ಅಧಿಕೃತ ಅಧಿಕಾರಿಯವರಿಂದ ಭೌತಿಕವಾಗಿ ಸ್ವಾಧೀನವನ್ನು ತೆಗೆದುಕೊಳ್ಳಲಾಗಿದೆ. **ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ,** ಸೆಕ್ಯೂರ್ಡ್ ಕ್ರೆಡಿಟರ್ ಇದರ ಜೊತೆಗೆ ಮುಂದಿನ ಬಡ್ಡಿ ಮತ್ತು ಕಾನೂನು / ಇತರ ವೆಚ್ಚಗಳೊಂದಿಗೆ ಬಾಕಿ ಮೊತ್ತದ ವಸೂಲಾತಿಗಾಗಿ ಅದನ್ನು **"ಎಲ್ಲಿ ಹೇಗಿದೆಯೋ ಹಾಗೆ" ಎಲ್ಲಿ ಏನಿದೆಯೋ ಹಾಗೆ"** ಮತ್ತು **ಅಲ್ಲಿ ಏನೇ ಇರಲಿ ಹಾಗೆ"** ಆಧಾರದ ಮೇಲೆ ಹೇಳಿದಂತೆ ಬಾಕಿ ವಸೂಲಿಗಾಗಿ ಕೆಳಗೆ ತಿಳಿಸಿದ ದಿನಾಂಕದಂದು, ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಸಾಲಗಾರ ಮತ್ತು ಜಾಮೀನುದಾರರಿಂದ ಮುಂದಿನ ಬಡ್ಡಿ ಮತ್ತು ಇತರೆ ಖರ್ಚುಗಳು ಜೊತೆಗೆ ಕೆಳಗೆ ತಿಳಿಸಲಾದ ಬಾಕಿಗಳನ್ನು ಮರು ಪಡೆಯಲು ಮತ್ತು ಮುಂಗಡ ಠೇವಣಿಯನ್ನು ಕೆಳಕಂಡ ದಿನಾಂಕದಂದು ಆಸ್ತಿಯ ಮೀಸಲು ಬೆಲೆ ಮತ್ತು ಮುಂಗಡ ಠೇವಣಿ (ಇಎಂಡಿ) ಸ್ಥಿರಾಸ್ತಿ ಇತ್ಯಾದಿಗಳನ್ನು ಕೆಳಗೆ ನೀಡಲಾಗಿದೆ.

ಶಾಖೆ: ಅಸೆಟ್ ರಿಕವರಿ ಶಾಖೆ ಬೆಂಗಳೂರು ಉತ್ತರ : ಸಾಲಗಾರ, ಸಹ–ಅರ್ಜಿದಾರರ, ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ : ಶ್ರೀ ಕಾಂತನ್ ಎಂ ಜಿ ಫ್ಲಾಟ್ ನಂ.004, ಮೊದಲ ಮಹಡಿ, ಎಸ್‌ಆರ್ ಎನ್‌ಕ್ಲೇವ್–II ಅಪಾರ್ಟ್‌ಮೆಂಟ್ ಆಸ್ತಿ ನಂ.1248, ಬಿಇಎಂಎಲ್ ಲೇಔಟ್, 3ನೇ ಹಂತ ಹಲಗೆವಡೇರಹಳ್ಳಿ, ಬೆಂಗಳೂರು ದಕ್ಷಿಣ–560098. **ಪರ್ಯಾಯ ವಿಳಾಸ:** ನಂ.1539 ಮಂಡ್ಯ ಮನೆ, 1ನೇ ಮೇನ್, 6ನೇ ಕ್ರಾಸ್, ನ್ಯಾಯಾಂಗ ಬಡಾವಣೆ, ಜಿಕೆವಿಕೆ ಪೋಸ್ಟ್, ಬೆಂಗಳೂರು, **ಪರ್ಯಾಯ ವಿಳಾಸ:** ನಂ.18, ಬೊಮ್ಮಲಿಂಗೇಶ್ವರ ನಿಲಯ, 3ನೇ ಮೇನ್, 3ನೇ ಕ್ರಾಸ್, ಎ ಸೆಕ್ಟರ್, ಅಮರಸುತನಗರ, ಬೆಂಗಳೂರು–92, **ಪರ್ಯಾಯ ವಿಳಾಸ** ನಿಸರ್ಗ ಪೌಲ್ಟ್ರಿ ತೋಟ, ವಮ್ಮಸಂದ್ರ ಗ್ರಾಮ, ಮುಳಬಾಗಿಲು ತಾಲ್ಲೂಕು, ಕೋಲಾರ ಜಿಲ್ಲೆ.
ಬರಬೇಕಾದ ಬಾಕಿ ಮೊತ್ತ: ರೂ.3,71,45,163.05 (ರೂಪಾಯಿ ಮೂರು ಕೋಟಿ ಎಪ್ಪತ್ತೊಂದು ಲಕ್ಷದ ನಲವತ್ತೈದು ಸಾವಿರದ ಒಂದುನೂರ ಅರವತ್ತಮೂರು ಮತ್ತು ಐದು ಪೈಸೆ ಮಾತ್ರ) **ದಿನಾಂಕ: 30.11.2025** ರವರೆಗೆ ಡೆಬಿಟ್ ಮಾಡಿದ ಬಡ್ಡಿಯಂತೆ +ಭವಿಷ್ಯದ ಬಡ್ಡಿ + ಇತರ ವೆಚ್ಚಗಳು.

ಆಸ್ತಿಯ ವಿವರ : ಆಸ್ತಿ 1: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ಕಟ್ಟಡದ ಸರ್ವೆ ನಂ.36, ಹೊಸ ಸರ್ವೆ ನಂ.125, ಭೂಮಿ ವಿಸ್ತೀರ್ಣ 2 ಎಕರೆ 20 ಗುಂಟೆಗಳು ಹರಪನಾಯಕನಹಳ್ಳಿ ಗ್ರಾಮ, ದುಗ್ಗಸಂದ್ರ ಹೋಬಳಿ, ಮುಳಬಾಗಿಲು ತಾಲ್ಲೂಕಿನಲ್ಲಿದ್ದು ಶ್ರೀ ಎಂ ಜಿ ಕಾಂತನ್‌ರವರ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಅಂಜನಪ್ಪರವರ ಹೆಸರಿನಲ್ಲಿರುವ ಭೂಮಿ, ಪಶ್ಚಿಮಕ್ಕೆ: ವಿ ಪುಟ್ಟೇಗೌಡರವರ ಹೆಸರಿನಲ್ಲಿರುವ ಭೂಮಿ, ಉತ್ತರಕ್ಕೆ: ಕೃಷ್ಣಪ್ಪರವರ ಹೆಸರಿನಲ್ಲಿರುವ ಭೂಮಿ, ದಕ್ಷಿಣಕ್ಕೆ: ಸ್ವಂತ ಭೂಮಿಗೆ ಸೇರಿದ ಜಮೀನು.
ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ಕಟ್ಟಡದ ಸರ್ವೆ ನಂ.36, ಹೊಸ ಸರ್ವೆ ನಂ.112, ಭೂಮಿ ವಿಸ್ತೀರ್ಣ 4 ಎಕರೆ ಹರಪನಾಯಕನಹಳ್ಳಿ ಗ್ರಾಮ, ದುಗ್ಗಸಂದ್ರ ಹೋಬಳಿ, ಮುಳಬಾಗಿಲು ತಾಲ್ಲೂಕಿನಲ್ಲಿದ್ದು ಶ್ರೀ ಎಂ ಜಿ ಕಾಂತನ್‌ರವರ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಅವರದೇ ಸ್ವಂತ ಭೂಮಿ, ಪಶ್ಚಿಮಕ್ಕೆ: ವಿ ವೆಂಕಟೇಶ್‌ಗೌಡರವರ ಭೂಮಿ, ಉತ್ತರಕ್ಕೆ: ವಿ ಪುಟ್ಟೇಗೌಡರವರ ಭೂಮಿ, ದಕ್ಷಿಣಕ್ಕೆ: ವೊಮ್ಮಸಂದ್ರ ಗ್ರಾಮದ ಗಡಿಗೆ ಸೇರಿದ ಭೂಮಿ.
ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡ ಕಟ್ಟಡದಸರ್ವೆ ನಂ.36, ಹೊಸ ಸರ್ವೆ ನಂ.132/4, ಎಂಆರ್ ನಂ.5/2008–09, ಖಾತಾ ನಂ.18, ಭೂಮಿಯ ವಿಸ್ತೀರ್ಣ 27 ಗುಂಟೆಗಳು, ವೊಮ್ಮಸಂದ್ರ ಗ್ರಾಮ, ದುಗ್ಗಸಂದ್ರ ಹೋಬಳಿ, ಮುಳಬಾಗಿಲು ತಾಲ್ಲೂಕಿನಲ್ಲಿದ್ದು ಶ್ರೀ ಎಂ ಜಿ ಕಾಂತನ್ ರವರ ಹೆಸರಿನಲ್ಲಿದೆ, ಚಕ್ಕುಬಂದಿ: ಪೂರ್ವಕ್ಕೆ: ಸರ್ಕಾರಿ ಖರಾಬ್ ಭೂಮಿ, ಪಶ್ಚಿಮಕ್ಕೆ: ರಸ್ತೆ ಮತ್ತು ಸರ್ಕಾರಿ ಖರಾಬ್, ಉತ್ತರಕ್ಕೆ: ವೆಂಕಟಸ್ವಾಮಿರವರ ಭೂಮಿ, ದಕ್ಷಿಣಕ್ಕೆ: ಮಾರಾಟಗಾರರ ಸ್ವಂತ ಜಮೀನು.
ಆಸ್ತಿ 2: ವಾಸಯೋಗ್ಯ ಫ್ಲಾಟ್ ನಂ.004, ಮೊದಲನೇ ಮಹಡಿ, ಎಸ್ ಆರ್ ಎನ್‌ಕ್ಲೇವ್–II, ಹಲಗೆದೇವರಹಳ್ಳಿ ಗ್ರಾಮ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದ್ದು, ಶ್ರೀ ಎಂ ಜಿ ಕಾಂತನ್‌ರವರ ಹೆಸರಿನಲ್ಲಿದೆ ಮತ್ತು ಫ್ಲಾಟ್ ಚಕ್ಕುಬಂದಿ: ಉತ್ತರಕ್ಕೆ: ನಿವೇಶನ ನಂ.1249, ದಕ್ಷಿಣಕ್ಕೆ: ನಿವೇಶನ ನಂ.1247, ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ.1125.

ಮೀಸಲು ಬೆಲೆ :	ಆಸ್ತಿ 1: ರೂ. 2,58,00,000/–	ಇಎಂಡಿ ಮೊತ್ತ : ರೂ. 25,80,00/–	ಬಿಡ್ ಗುಣಾಂಕ: ರೂ. 2,00,000/–
	ಆಸ್ತಿ 2: ರೂ. 49,00,000/–	ರೂ. 4,90,000/–	ರೂ. 1,00,000/–

ಸಾಮಾನ್ಯವಾಗಿ, ಆಸ್ತಿ/ಆಸ್ತಿಗಳ ಮೊದಲ ಬಿಡ್ ಮೀಸಲು ಬೆಲೆ + ಒಂದು ಹೆಚ್ಚಳವಾಗಿರುತ್ತದೆ. ಈ ಮೊತ್ತವು ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕನಿಷ್ಠ ಬಿಡ್ ಮೊತ್ತವಾಗಿರುತ್ತದೆ.

ಇಲ್ಲ, ಭದ್ರತಾ ಸಾಲದಾರ ಯಾವುದಾದರೂ ಋಣಭಾರ ತಿಳಿದಿದ್ದರೆ ವಿವರಗಳು: ಆದಾಗ್ಯೂ, ಉದ್ದೇಶಿತ ಬಿಡ್‌ದಾರರ ಋಣಭಾರಗಳು, ಆಸ್ತಿಯ ವಿರುದ್ಧ ಬಾಕಿ ಇರುವ ಯಾವುದೇ ನ್ಯಾಯಾಲಯದ ಪ್ರಕರಣಗಳು, ಹರಾಜಿಗೆ ಇಡಲಾದ ಆಸ್ತಿಯ ಶೀರ್ಷಿಕೆ ಮತ್ತು ಆಸ್ತಿಯ ಮೇಲೆ ಪರಿಣಾಮ ಬೀರುವ ಹಕ್ಕುಗಳು / ಹಕ್ಕುಗಳು/ ಬಾಕಿಗಳು, ಉದಾಹರಣೆಗೆ ವಿದ್ಯುತ್ ಬಿಲ್, ನೀರಿನ ಬಿಲ್, ಬಾಕಿ ಇರುವ ಸಿಎಎಂ ಶುಲ್ಕಗಳು, ಸಂಘಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಶುಲ್ಕಗಳು, ಖಾತಾ ವರ್ಗಾವಣೆ ಮತ್ತು ಆಸ್ತಿ ತೆರಿಗೆ ಇತ್ಯಾದಿಗಳ ಬಗ್ಗೆ ತಮ್ಮ ಬಿಡ್ ಸಲ್ಲಿಸುವ ಮೊದಲು ತಮ್ಮದೇ ಆದ ಸ್ವತಂತ್ರ ವಿಚಾರಣೆಯನ್ನು ನಡೆಸಬೇಕು. ಮಾರಾಟ ದೃಢಪಡಿಸಿದ ನಂತರ/ಹರಾಜು ಮುಕ್ತಾಯಗೊಂಡ ನಂತರ, ಹೆಚ್1 ಬಿಡ್ಡರ್‌ಗಳು ಪಾವತಿಸಿದ ಮಾರಾಟ ಬೆಲೆಯ ಮಾರಾಟವನ್ನು ರದ್ದುಗೊಳಿಸಲು / ಮರುಪಾವತಿ ಮಾಡಲು ಯಾವುದೇ ವಿನಂತಿಯನ್ನು ಪರಿಗಣಿಸಲಾಗುವುದಿಲ್ಲ.
ಯಶಸ್ವಿ ಬಿಡ್ದಾರನು ಇ – ಖಾತಾ ಮತ್ತು ನಂತರದ ಮಾರಾಟ ಪ್ರಮಾಣಪತ್ರದ ನೋಂದಣಿಯನ್ನು ಪಡೆಯಲು ತನ್ನದೇ ಆದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು.
ಖಾತೆಯನ್ನು ಹೊಂದಿರುವ ಸಂಖ್ಯೆ 800001980050000 A/C ಹೆಸರು : Inward RTGS IFSC ಕೋಡ್: UBIN0580007
ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಅಸೆಟ್ ರಿಕವರಿ ಶಾಖೆ, ಬೆಂಗಳೂರು ಉತ್ತರ, ನಂ.1234, 1ನೇ ಮಹಡಿ, 4ನೇ ಮುಖ್ಯ ರಸ್ತೆ, ಚಂದ್ರ ಲೇಔಟ್ ಬಸ್ ನಿಲ್ದಾಣದ ಎದುರು, ಚಂದ್ರ ಲೇಔಟ್, ಬೆಂಗಳೂರು–560040 ಅನ್ನು ಸಂಪರ್ಕಿಸಿ. ಮುಖ್ಯ ವ್ಯವಸ್ಥಾಪಕ ಶ್ರೀ ಸಿರಿಲ್ ಮೊಂತೆರೊ ಸಂಪರ್ಕ ಸಂಖ್ಯೆ 9825766633.

ಇ–ಹರಾಜಿನ ದಿನಾಂಕ ಮತ್ತು ಸಮಯ: ದಿನಾಂಕ : 28.01.2026(ಬುಧವಾರ) ರಂದು ಮಧ್ಯಾಹ್ನ 12.00 ರಿಂದ ಸಂಜೆ 5.00 ಗಂಟೆಯವರೆಗೆ (10 ನಿಮಿಷ ಅನಿಯಮಿತ ಸ್ವಯಂ ವಿಸ್ತರಣೆಗಳೊಂದಿಗೆ)
ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ : ಇ–ಹರಾಜು ಪ್ರಾರಂಭವಾಗುವ ಮುನ್ನ ಅಥವಾ ಮೊದಲು

ಗಮನಿಸಿ: (1) ಉದ್ದೇಶಿತ ಖರೀದಿದಾರರು https://baanknet.com (Buyer Registration – link provided in the home page of the website) ಮೂಲಕ ನೋಂದಾಯಿಸಿಕೊಳ್ಳಬೇಕು.
ಇಎಂಡಿ ಮೊತ್ತವನ್ನು (10%) https://baanknet.com ಮೂಲಕ ಪಾವತಿಸಬೇಕು ಮತ್ತು ಬಾಕಿ ಮೊತ್ತ
ಮಾರಾಟದ ಸೂಚನೆಯಲ್ಲಿ ನಮೂದಿಸಲಾದ ಖಾತೆ ಸಂಖ್ಯೆಯ ಮೂಲಕ ಮಾರಾಟದ ಬೆಲೆಯನ್ನು ಪಾವತಿಸಬೇಕು. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಕೆಳಗೆ ತಿಳಿಸಿದ ಬ್ಯಾಂಕ್‌ಗಳ ವೆಬ್‌ಸೈಟ್‌ನಂತೆ ಒದಗಿಸಲಾದ ಲಿಂಕ್ ಅನ್ನು ನೋಡಿ.
ಮತ್ತು ಇ–ಹರಾಜು ಏಜೆಂಟ್ ವೆಬ್‌ಸೈಟ್. ಡಿಜಿಟಲ್ ಸಹಿ ಕಡ್ಡಾಯವಲ್ಲ.

ದಿನಾಂಕ: 06.01.2026
ಸ್ಥಳ : ಬೆಂಗಳೂರು
www.unionbankofindia.co.in | https://baanknet.com
ಸಹಿ/– ಅಧಿಕೃತ ಅಧಿಕಾರಿ
ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ